ಶ್ರೀ ಆರ್.ವಿ. ದೇಶಪಾಂಡೆ : ಮತ್ತೊಂದು ಪ್ರಶ್ನೆ ಏನೆಂದರೆ ಕೆಲವು ಜನರಿಗೆ ತಾವು ಈ ಲೀಸನ್ನು ಕೊಡುವಾಗ ನಾಲ್ಕು ಎಕರೆ ಎಂದು ಕೊಟ್ಟಿದ್ದೀರಿ, ಕೆಲವರಿಗೆ 2 ಎಕರೆ ಕೊಟ್ಟಿದ್ದೀರಿ. ಮತ್ತೆ ಕೆಲವರಿಗೆ 20 ಎಕರೆಯಷ್ಟು ಕೊಟ್ಟಿದ್ದೀರಿ. ಈ ರೀತಿ ಬೇರೆ ಬೇರೆ ಜನರಿಗೆ ಬೇರೆ ಬೇರೆ ಏರಿಯಾ ಕೊಡುವಾಗ ಅದಕ್ಕೆ ಕ್ರೈಟೇರಿಯಾ ಏನು?

ಶ್ರೀ ಎಂ.ಎಲ್. ಉಸ್ತಾದ್ : ಕ್ರೈಟೇರಿಯಾ ಏನೂ ಇಲ್ಲ. So far as black granite is concerned not more than 10 Hectare i.e.25 acres are given. For others, not more than 20 Hectares i.e.50 acres are given, ಈ ಒಂದು ಕ್ರೈಟೇರಿಯಾವನ್ನು ಇಟ್ಟುಕೆಂಡು ಯಾರು ಎಷ್ಟು ಅಪ್ಲೈ ಮಾಡಿದ್ದರು, ಆಪ್ರಕಾರ ನಾವು ವಿಚಾರ ಮಾಡಿ ಕೊಟ್ಟಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಈಗ 3 ಮತ್ತು 3-ಎ ಎಂದು ಏತಕ್ಕೆ ವಿಂಗಡಿಸಿದ್ದೀರಿ? ಅದು ಏತಕ್ಕೆ ಏನು ಎಂದು ಅರ್ಥವಾಗಿಲ್ಲ. ನಿಯಮ 3ರ ಪ್ರಕಾರ 628 ಅರ್ಜಿಗಳನ್ನು ಸ್ವೀಕರಿಸಲಾಗಿದೆ ನಿಯಮ 3-ಎ ಪ್ರಕಾರ 2473 ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದ್ದೀರಿ. ಇದನ್ನು ಬೇರೆ ಬೇರೆ ಮಾಡತಕ್ಕಂಥ ಕಾರಣವೇನು? ಅದರಲ್ಲಿ ವಿಶೇಷ ಏನಿದೆ? ಆಮೇಲೆ ಇದರಲ್ಲಿ ಎಲ್ಲಾ ನಾವು ಕರ್ನಾಟಕದವರಿಗೇ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈ ಅಡ್ರೆಸ್ ಮಾತ್ರ ಕರ್ನಾಟಕವೇ? ಅಥವಾ ಅವರು ಇರುವುದು ಕರ್ನಾಟಕದಲ್ಲಿಯೇ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಎಂ.ಎಲ್. ಉಸ್ತಾದ್ : ಇದನ್ನು ಈಗ ಇಡೀ ಕರ್ನಾಟಕದವರಿಗೇ ಕೊಡಲಾಗಿದೆ. ಬೆಂಗಳೂರು, ಮೈಸೂರು, ಬೆಳಗಾಂ, ಬಿಜಾಪುರ ಈ ರೀತಿ ಎಲ್ಲಾ ಅಡ್ರೆಸಸ್‌ಗೆ ಕೊಡಲಾಗಿದೆ.

SRI M.L.USTAD : As per rule 3 ನಾವು ಯಾರಿಗೆ ಲೀಸ್ ಕೊಡುತ್ತೇವೆ? He must be a citizen of India.

ಅಧ್ಯಕ್ಷರು : ಶ್ರೀಲಂಕದವರು ಸೇರಿಲ್ಲ ಅಲ್ಲ.

SRI M.L.USTAD: He must be a citizen of India ಎಂದು ಇದೆ.

MR.SPEAKER : I think, I should go to the protection of the minister. ನೀವು ನಿಮ್ಮ ಪ್ರಶ್ನೆಯಲ್ಲಿ ಇವರೆಲ್ಲಾ ಕರ್ನಾಟಕದವರೇ? ಕರ್ನಾಟಕದವರಲ್ಲದೆ ಹೊರಗಡೆಯವರಿಗೆ ಕೊಟ್ಟಿದ್ದೀರ ಎಂದು ಕೇಳಿದ್ದರೆ, ಅವರು ಹುಡುಕಿ ಹೇಳುತ್ತಿದ್ದರು. ನೀವು ಪ್ರಶ್ನೆಯನ್ನು ಕೇಳಿ ಉಪಪ್ರಶ್ನೆ ಹೇಳಿದರೆ ಹೇಗೆ? He has gone by the addresses that have been furnished on the applications ಮತ್ತು applicants Indian citizens ಆಗಿರಬೇಕು ಎಂದು ಹೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಯಮ 3ರ ಪ್ರಕಾರ 628 ಅರ್ಜಿಗಳನ್ನು ತೆಗೆದುಕೊಂಡಿದ್ದೀರಿ. ನಿಯಮ 3(ಎ) ಪ್ರಕಾರ 2473 ಅರ್ಜಿಗಳನ್ನು ತೆಗೆದುಕೊಂಡಿದ್ದೀರಿ ಇದರಲ್ಲಿ ಏಕೆ ವ್ಯತ್ಯಾಸ ಇದೆ? ಇದರಲ್ಲಿ ಏನು ವಿಶೇಷ ಇದೆ?

SRI M.L. USTAD : The matter was pending beffore the High Court because Rule-3A was challenged. So many litigations are there. ಅದರ ಬಗ್ಗೆ ನಾವು ವಿಶೇಶಣೆ ಮಾಡುತ್ತಾ ಹೋದರೆ, ಸಬ್‌ಜ್ಯೂಡೀಸ್ ಆಗುತ್ತದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸಬ್‌ಜ್ಯುಡೀಸ್ ಹೇಗೆ ಆಗುತ್ತದೆಂದು ಉತ್ತರ ಕೊಡಬೇಕು, ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಸಬ್‌ಜ್ಯುಡೀಸ್ ಆಗುತ್ತದೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅವರು ಹೇಳುವುದು ವಿಶ್ಲೇಷಣೆ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಬ್‌ಜ್ಯುಡೀಸ್ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಈ ಸರ್ಕಾರದ ಆಜ್ಞೆಯ ವಿರಿದ್ದ ಉಚ್ಚನ್ಯಾಯಲಯಕ್ಕೆ ಹೋಗಿರತಕ್ಕಂತಹ ಅಪ್ಲಿಕೆಂಟ್ ನಾನೇ. public interest litigation ಹಾಕಿರತಕ್ಕವನು ನಾನೇ. ಸ್ಟೇ ತೆಗೆದುಕೊಂಡು ಬಂದಿರುವವನೂ ನಾನೇ. ನಾನು ಇದರ ಬಗ್ಗೆ ತಮ್ಮಲ್ಲಿ ಬಹಳ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾನಾಯಕರೂ ಇಲ್ಲೇ ಇದ್ದಾರೆ ; ಇದರ ಬಗ್ಗೆ ವಿಶೇಷವಾದ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಇದೇ ವಿಷಯದ ಬಗ್ಗೆ ಕೊನೆಯ ಪಕ್ಷ ಅರ್ದ ಗಂಟೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಏಕೆಂದರೆ ಇದು ಬಹಳ ಮಹತ್ವವಾದ ಪ್ರಶ್ನೆಯಾಗಿದೆ.

ಇದನ್ನು ಬಹಳಷ್ಟು ಸದಸ್ಯರುಗಳು ಕೇಳಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ಒಂದು ವಿಷಯ ಮಾತ್ರ ಕೇಳುತ್ತೇನೆ. ತಾವು ತಮ್ಮ ಸರ್ಕಾರದ ನೀತಿಯ ಪ್ರಕಾರವಾಗಿ ಇದನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಕಳೆದ ಸಾರಿ ಇದರ ಬಗ್ಗೆ ಖಾಸಗಿ ನಿರ್ಣಯವನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ತಂದು ಚರ್ಚೆ ಮಾಡುತ್ತಿರುವಾಗ, ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಎಲ್ಲಾ ವಿರೋಧ ಪಕ್ಷದವರನ್ನು ಕರೆಸಿ ಚರ್ಚೆ ಮಾಡಿ ನಾವು ಒಂದು ನೀತಿಯನ್ನು ನಿರೂಪಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ನೀವು ನೀತಿಯನ್ನು ಇನ್ನೂ ಅನೌನ್ಸ್ ಮಾಡಲಿಲ್ಲ. ಯಾವ ನೀತಿಯ ಪ್ರಕಾರವಾಗಿ ನೀವು ಇದನ್ನು ಕೊಟ್ಟಿದ್ದೀರ?

ಅದು ಯಾವ ನೀತಿ ಎನ್ನುವುದು ಮೊದಲನೆಯದು. ಎರಡನೆಯದಾಗಿ, ಉಚ್ಚನ್ಯಾಯಲಯ ಸ್ಟೇ ಕೊಟ್ಟಮೇಲೆ ಲೀಸ್ ಅಗ್ರಿಮೆಂಟ್ ಆಗಿಲ್ಲ ಎಂದು ಹೇಳಿದ್ದೀರಿ. ಲೀಸ್ ಅಗ್ರಿಮೆಂಟ್ ಆಗಿದೆ ಎಂದು ನಾನು ಹೇಳುತ್ತೇನೆ. ಲೀಸ್ ಅಗ್ರಿಮೆಂಟ್ ಆಗಿದೆ. ತಾವು ಈ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟುತ್ತಿದ್ದೀರಿ? There have been several instances where the government has entered into lease agreements with several individuals.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಚರ್ಚೆಗೆ ಎಂದು ಏನು ಕೇಳಿದ್ದೇವೆ, ತಾವು ಅವಕಾಶ ಮಾಡಿ ಕೊಡುವುದಾದರೆ ತಾವು ಈ ಪ್ರಶ್ನೆಯನ್ನು ತಡೆಹಿಡಿಯಬಹುದು. ಏಕೆಂದರೆ ಒಬ್ಬೊಬ್ಬರಿಗೆ 14-15 ಲೈಸೆನ್ಸ್ ಕೊಟ್ಟಿದ್ದಾರೆ. I can quote unpteen number of instances.

ಅಧ್ಯಕ್ಷರು : ಗ್ರಾನೈಟ್ ವಿಚಾರದಲ್ಲಿ ನಾನ್ ಅಫಿಷೀಯಲ್ ರೆಸಲ್ಯೂಷನ್ ನಡೆಯುತ್ತಿದೆ. ಇವತ್ತು ಈ ವಿಷಯ ಚರ್ಚೆಗೆ ಇದೆ. ಆ ಸಮಯದಲ್ಲಿ ತಾವೆಲ್ಲ ಚರ್ಚೆಯಲ್ಲಿ ಭಾಗವಹಿಸಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದೆ ಇರಬಹುದು. ನಾವು ಲೀಸ್ ಅಗ್ರಿಮೆಂಟ್ ಯಾವುದನ್ನೂ ಸಹ ಹೈಕೋರ್ಟ್ ಸ್ಟೇ ಬಂದ ಮೇಲೆ ಮಾಡಿಲ್ಲ ಎಂದು ಹೇಳುತ್ತಾರೆ. ನಾನು There have been several instances. ಎಂದು ಹೇಳುತ್ತಿದ್ದೇನೆ. ಇದಕ್ಕೆ ದಯವಿಟ್ಟು ತಾವು ಉತ್ತರ ಕೊಡಬೇಕು.

SRI M.L.USTAD : The total number of notifications that have been issued so far is 203. Out of that 152 leases have been executed. Fresh leases are about 91. Heldover cases with court orders 61. In 51 cases notifications were issued. In the meantime we received the High Court stay order. That is why in these 51 cases, lease deeds have not been executed. ಎಂದು ಹೇಳಿದ್ದೇನೆ. ಈಗಲೂ ಅದೇ ಹೇಳುತ್ತಿದ್ದೇನೆ. ನಾನೇನು ತಪ್ಪು ಮಾಹಿತಿಕೊಟ್ಟಿಲ್ಲ. Even after the court stay order ನಾವು lease deeds execute ಮಾಡಿದ್ದೇವೆಂದು ಹೇಳಿರುವುದು ಸತ್ಯಕ್ಕೆ ದೂರವಾದುದು.

9.45 ಎ. ಎಂ,

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಅವರು ಆ ರೀತಿ ಹೇಳುವುದು ಸರಿಯಲ್ಲ. ಮಾನ್ಯ ಸಭಾನಾಯಕರೆ, ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ದುಡ್ಡನ್ನು ಕಟ್ಟಿಸಿಕೊಂಡು, ಹೈ ಕೋರ್ಟ್ ಸ್ಟೇ ಬಂದಮೇಲೆ, ನಿಮ್ಮ ಸರ್ಕಾರದ ವಕೀಲರುಗಳು ಹೈ ಕೋರ್ಟಿನಲ್ಲಿ ಆದೇಶವನ್ನು ಪಡೆದ ಮೇಲೆ, ಲೀಸ್ ಅಗ್ರಿಮೆಂಟ್ ಆಗಿರುವುದನ್ನು ನಾನು ತೋರಿಸುತ್ತೇನೆ. ನೀವು ಇಲ್ಲವೆಂದು ಹೇಗೆ ಹೇಳುವಿರಿ? ಸುಳ್ಳು ಎಂದು ನೀವು ಹೇಳಬೇಡಿ. ಸುಳ್ಳು ಹೇಳುವುದಕ್ಕೆ ನಾವು ಬಂದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಸಾಬೀತು ಮಾಡಿದರೆ ನೀವು ಏನು ಮಾಡುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಸಾಬೀತು ಮಾಡಿದರೆ ನೀವು ನಿಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೀರ? ಸದನಕ್ಕೆ ಸತ್ಯಕ್ಕೆ ದೂರವಾದಂಥ ಉತ್ತರವನ್ನು ಕೊಟ್ಟಿರುವಂತಹವರು ಒಂದು ಕ್ಷಣವೂ ಮಂತ್ರಿಗಳಾಗಿ ಮುಂದುವರೆಯಲು ಸಾಧ್ಯವಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ದೊಡ್ಡ ಹಗಲು ದರೋಡೆಯೇ ನಡೆದಿದೆ. ಇದು ಸುಲಭವಾಗಿ ತೆಗೆದುಕೊಳ್ಳುವಂಥ ಪ್ರಶ್ನೆಯಲ್ಲ. ಅವರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಸತ್ಯಕ್ಕೆ ದೂರವಾದುದನ್ನು ಹೇಳುತ್ತಿದ್ದಾರೆ. ಅದು ಸರಿಯಾದ್ದಲ್ಲ. ಅವರು ಹೇಳುವುದು ನಿಜವಲ್ಲವೆಂದು ಸಾಬೀತಾದರೆ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಿರೋಧ ಪಕ್ಷದ ಉಪ-ನಾಯಕರು ಹೇಳಿದಂಥ ಮಾತಿಗೆ ಮಾನ್ಯ ಮಂತ್ರಿಗಳು 'ಸುಳ್ಳು' ಎಂಬ ಪದವನ್ನು ಉಪಯೋಗಿಸಿದ್ದಾರೆ,ಒಳ್ಳೆಯದು. ತುಂಬ ಸಂತೋಷ, ಅವರು ಹೇಳಿದಂಥ ಮಾತು ಸತ್ಯವೆಂದು ಸಾಬೀತು ಮಾಡಲು ಈ ಸ್ಥಳದಲ್ಲೇ ನನ್ನ ಹತ್ತಿರ ದಾಖಲೆ ಇದೆ. ಆ ದಾಖಲೆಯನ್ನು ಒದಗಿಸಿಕೊಡುತ್ತೇನೆ. ಅವರು ಈ ಕ್ಷಣಕ್ಕೆ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಡಬೇಕು. ಇಲ್ಲದಿದ್ದರೆ ಒಂದು ಕ್ಷಣವೂ ಮುಂದುವರೆಯಲು ಸಾಧ್ಯವಿಲ್ಲ. ಇಂಥ ಪ್ರಮುಖವಾದಂಥ ಸದನದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಶ್ನೆಯನ್ನು ಕೇಳಿದಾಗ, ಸರ್ಕಾರದ ವತಿಯಿಂದ ಮಂತ್ರಿಗಳು ಬೇಜವಾಬ್ದಾರಿಯಿಂದ ಉತ್ತರ ಕೊಟ್ಟರೆ ಅವರು ತಮಮ್ಮ ಸ್ಥಾನದಲ್ಲಿ ಎಂದು ಕ್ಷಣವೂ ಮುಂದುವರೆಯಲು ಸಾಧ್ಯವಿಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕು. ನಾವು ದಾಖಲೆಯನ್ನು ಕೊಡುತ್ತೇವೆ.. ಆ ನಿಮಿಷದಲ್ಲೇ ಅವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗಬೇಕು. ಇಂಥ ನಾಲಾಯಕ್ ಜನ ಮಂತ್ರಿಗಳಾಗಿ ಮುಂದುವರೆಯಲು ಸಾಧ್ಯವಿಲ್ಲ. ಈ ಸದನದಲ್ಲಿ ಉತ್ತರವನ್ನು ಕೊಡಬೇಕಾದರೆ ಬಹಳ ಗೌರವದಿಂದ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಅವರು ತುಂಬು ಗೌರವದಿಂದಲೇ ಉತ್ತರ ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಪ್ಪು ಮಾಹಿತಿಯನ್ನು ಕೊಡುವಂಥ ಮಂತ್ರಿಗಳು ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವಿಲ್ಲ.

ಅಧ್ಯಕ್ಷರು : ಅವರು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ ಎನ್ನುವುದು ನಿಮ್ಮ ಅನಿಸಿಕೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ಸದನದಲ್ಲಿ ದಾಖಲೆಯನ್ನು ಕೊಡುತ್ತೇನೆ. ಆ ನಿಮಿಷವೇ ಅವರು ರಾಜೀನಾಮೆಯನ್ನು ಕೊಡಬೇಕು.

ಅಧ್ಯಕ್ಷರು : ದಾಖಲೆಯನ್ನು ಕೊಡಿ. ಕಂಡೀಷನ್ ಏಕೆ ಹಾಕುತ್ತಿದ್ದೀರಿ ?

ಸದನದ ಮುಂದೆ ನಿಜ ಸಂಗತಿಗಳನ್ನು ಇಡಬೇಕಾದದ್ದು ನಿಮ್ಮ ಧರ್ಮ, ನಿಮ್ಮ ಕರ್ತವ್ಯ. ಆ ಕರ್ತವ್ಯ ಪರಿಪಾಲನೆಯನ್ನು ಮಾಡುವ ದೃಷ್ಟಿಯಿಂದ ನಿಮ್ಮ ಹತ್ತಿರ ಇರುವಂಥ ಮಾಹಿತಿಯನ್ನು ನನ್ನ ಮೂಲಕ ಸದನದ ಮುಂದೆ ಇಡಿ. ಅದಕ್ಕೆ ಅವರು ರಾಜಿನಾಮೆ ಕೊಡಬೇಕು ಎಂದು ಕಂಡೀಷನ್ ಏಕೆ ಹಾಕುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಗಳನ್ನು ಕೊಡುತ್ತೇವೆ. ಅವರು ರಾಜೀನಾಮೆಯನ್ನು ಕೊಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಂಥ ದೊಡ್ಡ ಭ್ರಷ್ಟಾಚಾರ ನಡೆದಿದೆ. ಉತ್ತರ ಸರಿಯಲ್ಲ, ಬೇಜವಾಬ್ದಾರಿಯಿಂದ ಕೆಲವು ಸದಸ್ಯರು ಮಾತನಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಈ ಸಭೆಗೆ ತಪ್ಪು ಉತ್ತರವನ್ನು ಕೊಡುತ್ತಿದ್ದಾರೆ. ಇದನ್ನು ನಾನು ಖಂಡಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸತ್ಯಕ್ಕೆ ದೂರವಾದುದೆಂದು ನಾನು ವಚನ ಕೊಡುತ್ತೇನೆ.

ಅಧ್ಯಕ್ಷರು : ಯಾವುದು ಸತ್ಯಕ್ಕೆ ದೂರವಾದುದು.

ಶ್ರೀ ವಾಟಾಳ್ ನಾಗರಾಜ್ : ಹೈ ಕೋರ್ಟ್ ತಡೆಯಾಜ್ಞೆ ಕೊಟ್ಟ ಮೇಲೂ ನಡೆಯುತ್ತಿರುವುದು. ಮಾನ್ಯ ಮೊಯಿಲಿಯವರೆ ನಾನು ತಮಗೆ ಹೇಳುತ್ತೇನೆ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಈ ಬಗ್ಗೆ ನಿರಂತರವಾಗಿ ಹೋರಾಟ ನಡೆಸಿದ್ದೇವೆ, ನಾವು ಯಾರನ್ನು ವೈಯಕ್ತಿಕವಾಗಿ ದೂರುತ್ತಿಲ್ಲ. ಅದರಲ್ಲಿ ನಮ್ಮ ಆಕ್ಷೇಪವಿಲ್ಲವೆಂದು ನಾವು ಹೇಳುತ್ತಿದ್ದೇವೆ. ಇದರಲ್ಲಿ ಅನ್ಯಾಯ ಮತ್ತು ಲೂಟಿ ನಡೆಯುತ್ತಿದೆ. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ. ಅವರು ಹೇಳಿದ್ದುದು ಮತ್ತು ನೀವು ಹೇಳುತ್ತಿರುವುದು ರೆಕಾರ್ಡ್ ಆಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಮಂತ್ರಿಗಳನ್ನು ವೈಯಕ್ತಿಕವಾಗಿ ದೂರುತ್ತಿಲ್ಲ.

ಅಧ್ಯಕ್ಷರು : ನೀವು ಯಾವುದನ್ನು ತಪ್ಪು ಮಾಹಿತಿ ಎಂದು ಹೇಳುತ್ತಿದ್ದೀರಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಿಮ್ಮಪ್ಪನವರೇ, ಇದು ಸರಿಯಲ್ಲ. ತಾವು ಹಿರಿಯ ಸದಸ್ಯರು ಇದರಲ್ಲಿ ಅನ್ಯಾಯ ನಡೆದಿದೆ. ಸ್ವಾಮಿ, ತಿಮ್ಮಪ್ಪನವರು ದಾರಿ ತಪ್ಪುತ್ತಿದ್ದಾರೆ. ನಾನು ನಿಮ್ಮ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇನೆ.

(ಗೊಂದಲ)

ಅಧ್ಯಕ್ಷರು : ನಿಮ್ಮ ಮಾತು ಸರಿಯಾಗಿ ಕೇಳಿಸುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಭಾಧ್ಯಕ್ಷರೆ, ನಾವು ತಮ್ಮಲ್ಲಿ ಅತ್ಯಂತ ಕಳಕಳಿಯ ಮನವಿ ಮಾಡಿಕೊಳ್ಳುತ್ತಿದ್ದೇವೆ. ಹೈಕೋರ್ಟಿನಲ್ಲಿ ತಡೆಯಾಜ್ಞೆ ಬಂದ ನಂತರ ಮತ್ತೆ ಲೀಸ್‌ಗಳನ್ನು ಕೊಟ್ಟಿರತಕ್ಕ ಪ್ರಕರಣಗಳು ಅನೇಕ ಇವೆ. ಇದನ್ನು ಅವರು ಸುಳ್ಳೆಂದು ಹೇಳಿದರೆ, ಆ ಪದ ಹೇಳಿದರೆ, ನನಗೆ ಅವರ ಉತ್ತರದ ಬಗ್ಗೆ ಕೋಪ ಅಷ್ಟೇ ಹೊರತು ವೈಯಕ್ತಿಕವಾಗಿ ಪ್ರಶ್ನೆ ಏನೂ ಇಲ್ಲ. ಇದರಲ್ಲಿ ಅನೇಕ ವಿಚಾರಗಳಿವೆ. ಲೀಸ್‌ಗಳನ್ನು ಕೊಟ್ಟಿದ್ದಾರೆ. ಬೇಕಾದರೆ ಅವರ ಅಧಿಕಾರಿಗಳನ್ನು ಕೇಳಿ, ಇಲ್ಲೇ ಸಾಬೀತುಪಡಿಸಲಿ.

ಅಧ್ಯಕ್ಷರು : ಯಾವ ರೂಲ್ಸ್ ಪ್ರಕಾರ ಅವರು ಅಧಿಕಾರಗಳನ್ನು ಕೇಳಿ ಇಲ್ಲೇ ಸಾಭೀತುಪಡಿಸಲಿ ಎಂದು ಹೇಳುವುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ನನಗೆ ಅರ್ಥವಾಗುತ್ತಿಲ್ಲ. ಇದು ಸುತ್ತ ಒಂದು ರೀತಿಯ ಕಾರಸ್ಥಾನ ಆಗಿತ್ತಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸಚಿವರು ಏನು ಉತ್ತರ ಹೇಳಿದ್ದಾರೆ, ಅವರು ತಪ್ಪು ಮಾಹಿತಿ ಕೊಡುತ್ತಿದ್ದಾರೆಂದು ನೀವು ಹೇಳುತ್ತಿದ್ದೀರಿ. ನಿಜ ಸಂಗತಿಗಳನ್ನು ಸದನದ ಮುಂದೆ ಇಡುತ್ತೇನೆಂದು ಸಚಿವರು ಪ್ರತಿಪಾದನೆ ಮಾಡುತ್ತಿದ್ದಾರೆ. ಈ ನ್ಯಾಯ ಎಲ್ಲಾದರೂ ಒಂದು ಕಡೆ ಬಗೆಹರಿಯಬೇಕಲ್ಲ; ಹೇಗೆ ಬಗೆಹರಿಸುತ್ತೀರಿ? ಮಾನ್ಯ

ಯಡಿಯೂಪ್ಪನವರು ತಮ್ಮ ಬ್ರೀಫ್‌ಕೇಸ್ ತಗೆದು ದಾಖಲೆ ಇಲ್ಲೇ ಇದೆಯೆಂದು ಹೇಳಿ ಪುನಃ ಅದನ್ನು ಮುಚ್ಚಿಡುತ್ತಿದ್ದಾರೆ. ಈಗ ನಾನು ಇದನ್ನು ಬಗೆಹರಿಸತಕ್ಕಂಥ ಬಗೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಗೆದು ಇಟ್ಟಿರುವುದು ನಿಜ, ಮುಚ್ಚಿಟ್ಟಿರುವುದೂ ನಿಜ. ಮಂತ್ರಿಗಳು ಹೇಳಲಿ ಮಾನ್ಯ ಸಭಾನಾಯಕರು ಇಲ್ಲಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇದು ಸಭಾನಾಯಕರ ಪ್ರಶ್ನೆಯಲ್ಲಿ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. and he stands by that statement.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈಗ ನಾನು ಹೇಳುತ್ತಿದ್ದೇನೆ, ಕೋರ್ಟ್ ಆರ್ಡರ್ ಆದಮೇಲೆ ಗ್ರಾನೈಟ್ ಕಲ್ಲಿಗೆ ಲೈಸೆನ್ಸ್ ರೆಜಿಸ್ಟ್ರೇಷನ್ ಕೊಟ್ಟಿರುವುದು ಆಗಿರುವಂಥ ದಾಖಲೆಗಳನ್ನು ನಾನು ಒದಗಿಸಿಕೊಡದಿದ್ದರೆ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಅವರು ಅವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತಾರೆಯೇ ಅವರು ಅವರ ಕಂಡೀಷನ್‌ನನ್ನು ಹೇಳಲಿ, ಒಪ್ಪಿಕೊಳ್ಳಲಿ ನಾನು ಈಗ ಸದನದಲ್ಲಿ ಕೊಡುತ್ತೇನೆ.

ಅಧ್ಯಕ್ಷರು : ಈಗ ನೀವು ಪ್ರೂವ್ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ನೀವು ರಾಜೀನಾಮೆ ಕೊಡುತ್ತೇನೆಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ, ಅವರು ಅವರ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆಯೆ?

(ಗೊಂದಲ)

ಅಧ್ಯಕ್ಷರು : ಮಾನ್ಯ ಕೌಜಲಗಿಯವರೆ, ನೀವು ರಾಜೀನಾಮೆ ಕೊಟ್ಟುಬಿಡುತ್ತೀರಾ? ಯಡಿಯೂರಪ್ಪನವರು ಹೇಳುತ್ತಾರೆಂದು ನೀವು ಕೂಡ ರಾಜೀನಾಮೆಯನ್ನು ಕೊಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಎಲ್ಲರೂ ರಾಜೀನಾಮೆ ಕೊಡಬೇಕೆಂದು ತಮಗೆ ಇಚ್ಛೆ ಇದೆಯೋ ಸರ್ಕಾರಕ್ಕೆ ಇಚ್ಛೆ ಇದೆಯೇ ಹೇಳಲಿ ನಾವೆಲ್ಲರೂ ರಾಜೀನಾಮೆ ಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ನಾಯಕರು ಚಾಲೆಂಜ್ ತೆಗೆದುಕೊಂಡರೂ ಕೂಡ ಮಂತ್ರಿಗಳು ಚಾಲೆಂಜ್ ತೆಗೆದುಕೊಳ್ಳದಿರುವುದು ನಮಗೆ ಆಶ್ಚರ್ಯವಾಗುತ್ತದೆ. ನಮ್ಮ ನಾಯಕರು ಚಾಲೆಂಜ್ ತೆಗೆದುಕೊಂಡು ರಾಜೀನಾಮೆ ಕೊಡುತೇವೆಂದು ಮುಂದೆ ಬಂದಿರಬೇಕಾದರೆ ಅವರು ಚಾಲೆಂಜ್‌ನ್ನು ಸ್ವೀಕಾರ ಮಾಡದಿರುವುದನ್ನು ನೋಡಿದರೆ ಅವರು ಅನ್ಯಾಯ, ದ್ರೋಹ ಭ್ರಷ್ಟಾಚಾರ ಮಾಡುತ್ತಿರುವುದಕ್ಕೆ ಇದೇ ಸಾಕ್ಷಿಯಾಗಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಾನೊಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನಗೆ ಮಾತನಾಡಲು ಅನುಮತಿಕೊಟ್ಟು 10 ನಿಮಿಷವಾಯಿತು. ತಾವು ಆ ಮೇಲೆ ಮಾತನಾಡಿ. Don't disturb me. I am on my legs.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿರುವ ವಿಷಯ ಬಹುಶಃ ಬಹಳ ಸರಳವಾಗಿದೆ ವಿಚಾರ ಬಹಳ ಗಂಭೀರವಾಗಿರಬಹುದು.

ತಾವು ಪ್ರಶ್ನೆಯನ್ನು ಎತ್ತತಕ್ಕಂತಹ ಉದ್ದೇಶವೇನೆಂದರೆ ಒಂದು ವಿಚಾರವನ್ನು ತಿಳಿದುಕೊಳ್ಳಬೇಕು, ಸತ್ಯಾಂಶ ಸದನಕ್ಕೆ ಸಿಗಬೇಕೆಂಬ ಉದ್ದೇಶ ಇರಬಹುದು. ಈಗ ಸನ್ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ. ಸುಳ್ಳು ಎಂದು ಇಲ್ಲಿ ಹೇಳಬಾರದು. ಅದು ಕಡತದಲ್ಲಿದ್ದರೆ ಅದನ್ನು ಹಿಂದಕ್ಕೆ ತಗೆದುಕೊಳ್ಳುವುದಕ್ಕೆ ಅವರು ಸಿದ್ಧರಿದ್ದಾರೆ. That need not go into the records. We are sorry for it. ಸುಳ್ಳು ಎಂಬ ಶಬ್ದವನ್ನು ಸದನದ ಸಂಪ್ರದಾಯದ ಪ್ರಕಾರ ನಾವು ಉಪಯೋಗ ಮಾಡಬಾರದು. ತಮಗೆ ಗೊತ್ತಿದೆ, he is a new Minister. Sometimes there will be a slip of the tongue. ತಾವು ಮಾತನಾಡಿದ್ದೆಲ್ಲಾ ಸತ್ಯಕ್ಕೆ ದೂರವಾದ ವಿಚಾರ ಎಂದು ಅವರು ಮಾಹಿತಿ ಪ್ರಕಾರ ಅವರು ಹೇಳಿದ್ದಾರೆ. ಇಲ್ಲಿ ಪ್ರಶ್ನೆ ಇಷ್ಟೆ ಈ ಪಬ್ಲಿಕ್ ಲಿಟಿಗೇಷನ್ ಪಿಟಿಷನ್‌ನನ್ನು ಸನ್ಮಾನ್ಯ ವಿರೋಧಪಕ್ಷದ ಉಪನಾಯಕರು ಹೈಕೋರ್ಟ್‌ನಲ್ಲಿ ಹಾಕಿದ್ದಾರೆ. ಅದಕ್ಕೆ ಕೊಟ್ಟಿದ್ದಾರೆ. ಈಗ ಸ್ಟೇ ಕೊಟ್ಟಮೇಲೂ ಕೂಡ ಲೀಸ್ ಎಗ್ಸಿಕ್ಯೂಟ್ ಮಾಡಿದ್ದರೆಂದು ಒಂದು ಆಪಾಧನೆಯನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ಈಗ ಸಚಿವರು ಅದು ಸತ್ಯಕ್ಕೆ ದೂರವಾದುದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಅವರು ಆಪಾದನೆ ಮಾಡಿದ್ದಾರೆ we can still verify ಆದರೆ ನಮ್ಮ ಮಾಹಿತಿ ಪ್ರಕಾರ ಅವರ ಜೊತೆಯಲ್ಲಿದ್ದ ಮಾಹಿತಿಯ ಪ್ರಕಾರ, before the stay order was issued, the lease was executed. ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತಿದೆ ತಾವು ವಕೀಲರಾಗಿದ್ದೀರಿ ನಾವೂ ವಕೀಲರಾಗಿದ್ದೇವೆ. ಮಾನ್ಯ ಏಕಾಂತಯ್ಯನವರಿಗೂ ಗೊತ್ತಿದೆ. Sometimes what happens, the lease is executed, the part concerned or any one of the party can approach the Registrar for registration. Registration is a different process. Suppose, some registration has tken place after execution of the lease...

(interruption)

ಶ್ರೀ ವಾಟಾಳ್ ನಾಗರಾಜ್ : ಈ ವಕೀಲಗಿರಿ ಬೇಡ. ನೀವು ಯಾವಾಗಲೂ ಈ ಸ್ಥಳದಲ್ಲಿಯೇ ದಾರಿ ತಪ್ಪುವುದು, ಇದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಅದನ್ನು ವೆರಿಫೈ ಮಾಡುತ್ತೇನೆ. ಸಪೋಸ್ ಸೇಲ್ ಡೀಲ್ ರಿಜಿಸ್ಟರ್ ಆಗುತ್ತದೆ. ಯವುದೋ ಕಾಲದಲ್ಲಿ ರಿಜಿಸ್ಟರ್ ಆಗುತ್ತದೆ. I mean sometimes on some future date registration, ಆಗುತ್ತದೆ. sometimes it take place. The date of cxecution of document is one thing registration is a second phase. That can take place any time and any party can also go for the registration. Whether that would amount to contempt of the Court or not is the point.

ಅದನ್ನು ತಾವು ಪ್ರಶ್ನೆ ಮಾಡುತ್ತಿದ್ದೀರಿ ಅದನ್ನು ಅಲ್ಲಿಯೂ ಪ್ರಶ್ನೆ ಮಾಡಬಹುದು. contempt of the court ಇದು ಸ್ಟೇ ಆಗುತ್ತದೆಯೋ ಇಲ್ಲವೋ ಎಂಬ ಪ್ರಶ್ನೆ ಅದು ಪ್ರತ್ಯೇಕ. ಅಂಥಾದನ್ನು ಯಾವುದಾದರೂ ಪಾರ್ಟಿ ರಿಜಿಸ್ಟ್ರೇಷನ್ ಮಾಡಿದರೆ we will veryfy that. ಅದು ಸ್ಟೇ ಆರ್ಡರ್‌ಗೆ ಕಾಂಟೆಮ್ಪ್ಟ್ ಆಗುತ್ತದೋ ವಯೋಲೇಶನ್ ಆಗುತ್ತದೋ execution of the deed ಮಾಡಿದರೆ it may amount to contempt of the court. ಕಂಟೆಮ್ಪ್ಟ್ ಆಗಬಹುದು. ರಿಜಿಸ್ಟ್ರೇಷನ್ ಆದರೆ ಅದೂ ಕಂಟೆಮ್ಪ್ಟ್ ಆಗುತ್ತದೆಯೋ ಇಲ್ಲವೋ ಎಂಬ ಪ್ರಶ್ನೆ ಪ್ರತ್ಯೇಕ. We will definitely verify, because after execution of the lease deed, if any party concerned has gone

to the Registrar office and registered, that is a matter which we will verify and give details to this House. We do'nt want to suppress anything.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. the whole matter is sub-judice. ಏಕೆಂದರೆ, ಇದು ಕೋರ್ಟ್‌ಗೆ ಹೋಗಿದೆ, ಅಲ್ಲಿ ಸ್ಟೇ ಕೊಟ್ಟಿದ್ದಾರೆ. suppose we discuss on the registration matter or ಸ್ಟೇ ಕೊಟ್ಟ ಮೇಲೂ ನೀವು ರಿಜಿಸ್ಟರ್ ಮಾಡಿದ್ದೀರಿ ಅಥವಾ ಎಕ್ಸಿಕ್ಯೂಟ್ ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ಸದನದಲ್ಲಿ ಕೇಳುತ್ತಿದ್ದರೆ ಅಥವಾ ಸನ್ಮಾನ್ಯ ಸಚಿವರು ಉತ್ತರ ಕೊಟ್ಟರೆ What happens? that will be sujudice ಇಲ್ಲಿ ನಾವು ವಿಶ್ಲೇಷಣೆ ಮಾಡುವುದಕ್ಕೆ ಹೋದರೆ, on two parallel forums we will be discussing the contempt matter. I don'nt think that is permissible ಇದು ಮಾನ್ಯ ಸಂಧ್ಯರವರಿಗೆ ಗೊತ್ತಿದೆ. ಈಗ ಸಬ್‌ಜುಡೀಸ್ ಇದ್ದುದರಿಂದ ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದರ ಬದಲು ಸಧ್ಯ ಕೋರ್ಟ್ ಕೇಸ್ ಕ್ಲಿಯರ್ ಆದಮೇಲೆ I think this can come up for a fullfledged discussion. We do'nt mind to have a fullfledged discussion over this matter.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಸಬ್ ಜುಡೀಸ್ ಎನ್ನುವ ಪದದ ವ್ಯಾಖ್ಯೆಯನ್ನು ತಾವು ಸ್ವಲ್ಪ ಕೊಟ್ಟರೆ ಒಳ್ಳೆಯದು. ಲೈಸೆನ್ಸ್ ಕೊಟ್ಟಿರುವುದು ಅಪರಾಧವೆಂದು ಹೇಳಿ ಸ್ಟೇ ಕೊಟ್ಟಿದ್ದರೆ "Stay" if that is going to be subjudice let us discuss "subjudice".

ಶ್ರೀ ವಾಟಾಳ್ ನಾಗರಾಜ್ : ಕೋರ್ಟ್ ಹೇಳತಕ್ಕಂಥ ಕೇಸ್ ಬೇರೆ, ಸಬ್ ಜುಡೀಸ್ ಆಗತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ ಇಲ್ಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕೋರ್ಟ್‌ನಲ್ಲಿ ಹೇಳಿರುವ ಪ್ರಶ್ನೆ ಬೇರೆ, ನಾವು ಕೇಳತಕ್ಕಂಥ ಪ್ರಶ್ನೆ ಬೇರೆ ಕೋರ್ಟ್‌ಗೆ ಹೋಗತಕ್ಕಂಥದ್ದು ಸರಿ ಅಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಎಕ್ಸಿಕ್ಯೂಷನ್ ಮತ್ತು ರಿಜಿಸ್ಟ್ರೇಷನ್ ಡಿಫರೆಂಟ್ ಆಗುವುದಕ್ಕೆ ಸಾಧ್ಯವಿಲ್ಲ, ಒಪ್ಪಿಕೊಳ್ಳುತ್ತೇವೆ. ತಾವು ಏನು ಹೇಳುತ್ತಿದ್ದೀರಿ ಅಂದರೆ ಎಕ್ಸಿಕ್ಯೂಷನ್ ಆಗಿರಬಹುದು, Registration may be after. Whether it is contempt or not ಅದರಲ್ಲಿ ಇಂಪ್ಲಿಕೇಷನ್ ಹೇಗೆಂದರೆ, It may be that Government might have given ante-dated leases to defeat the stay order.

ಶ್ರೀ ಹೆಚ್. ಏಕಾಂತಯ್ಯ : ಆ ಸಾಧ್ಯತೆ ಏಕೆ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಆಂಟಿ ಡೇಟ್ ಹಾಕಿ, ಲೀಸ್ ಡೇಟ್ ಕೊಟ್ಟು ರಿಜಿಸ್ಟ್ರೇಷನ್ ಆಮೇಲೆ ಮಾಡಿಕೊಳ್ಳಿರಿ ಎಂದರೆ ನಿಮ್ಮ ಕೆಲಸವೂ ಆಯಿತು,ಅವರ ಕಲಸವೂ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾವ ಸರ್ಕಾರ ಮಾಡಿರಬಹುದು, ನಮ್ಮ ಸರ್ಕಾರ ಮಾಡಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ತಾವು ಹೇಳುತ್ತಿದ್ದೀರಿ. ನಾನು ನಿಮಗೆ ಹೇಳುತ್ತಿದ್ದೇನೆ. ಡಿಟೈಲ್ ಹೋಗಬೇಕಾದರೆ, ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಆಫ್‌ರ್ ಅವರ್ ಡಿಸ್‌ಕಷನ್ ಇಡಬೇಕು. ಹೌಸ್ ಕಮಿಟಿ ಮಾಡಿ. Let them go into all these details. ಏಕೆಂದರೆ, ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ, ಸಾಕಷ್ಟು ಲೂಟಿ ಆಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸನ್ಮಾನ್ಯ ಮಂತ್ರಿಗಳನ್ನು, ಕಾನೂನು ಸಚಿವರನ್ನು ಅಥವಾ ಸರ್ಕಾರವನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ. ತಾವು ರಿಟ್ ಪ್ರಿಟಿಷನ್ ಸ್ಟೇ ವೆಕೇಟ್ ಮಾಡುವುದಕ್ಕೋಸ್ಕರ ವಿಶೇಷ ಪ್ರಯತ್ನ ಮಾಡಿ, ಕೋರ್ಟ್ ಮುಂದೆ ವಿಫಲರಾದ ಮೇಲೆ ಅವರಿಗೆ ಅನುಕೂಲ ಮಾಡಿಕೊಡುವುದಕೋಸ್ಕರ ಮತ್ತೆ ರೂಲ್‌ನ್ನು ಅಮೆಂಡ್‌ಮೆಂಟ್ ಮಾಡಿದ್ದೀರಾ? ರಿಟ್ ಪ್ರಿಟಿಷನ್‌ನಲ್ಲಿ ಸ್ಟೇ ಇದ್ದುದರಿಂದ ಅದನ್ನು ವೆಕೇಟ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿತು. ಅದು ನಿಮ್ಮಿಂದ ಆಗಲಿಲ್ಲ. ಆ ಲೈಸೆನ್ಸ್‌ದಾರರಿಗೆ ಅನುಕೂಲ ಮಾಡಿಕೊಡಬೇಕು, ವ್ಯವಹಾರ ಮುಂದುವರಿಯಬೇಕು ಎನ್ನುವ ದೃಷ್ಟಿಯಿಂದ, ಅವರ ಹಿತದೃಷ್ಟಿಯಿಂದ ಮತ್ತೆ ರೂಲ್ಸ್‌ನ್ನು ಸರ್ಕಾರ ಅಮೆಂಡ್‌ಮೆಂಟ್ ಮಾಡಿದೆಯೇ? ಕೋರ್ಟ್‌ನಲ್ಲಿ ಸ್ಟೇ ಇದೆ, ಅದನ್ನು ಹೊರಗಿಟ್ಟುಕೊಂಡು, ವ್ಯವಹಾರ ಮುಂದುವರಿಸಿಕೊಂಡು ಹೋಗಬೇಕೆನ್ನುವ ದೃಷ್ಟಿಯಿಂದ ಸರ್ಕಾರ ಏನಾದರೂ ಮತ್ತೆ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿದೆಯೇ I want know that. ಸನ್ಮಾನ್ಯ ಮೊಯಿಲಿಯವರು ಹಿರಿಯ ಸಚಿವರಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು, ಸಭಾನಾಯಕರು ಈ ಮನೆಯಲ್ಲಿದ್ದಾಗ, ಇಷ್ಟೊಂದು ಗಂಭೀರವಾದಂಥ ಒಂದು ಪ್ರಶ್ನೆ ಉದ್ಭವ ಆದಾಗ ನಾನು ನೇರವಾಗಿ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಇತ್ತೀಚಿಗೆ ಕೊಟ್ಟಂಥ ಲೀಸ್‌ಬಗ್ಗೆ ಸನ್ಮಾನ್ಯ ಸಿಂಧ್ಯರವರು ಏನು ಪಬ್ಲಿಕ್ ಲಿಟಿಗೇಷನ್ ಹಾಕಿದ್ದಾರೆ, ಈತನ್ಮಧ್ಯೆ ಯಾವ ಕಾನೂನು ಬದಲಾವಣೆ ಮಾಡಿಲ್ಲ. ತಮಗೆ ಗೊತ್ತಿದೆ, ಹಲವಾರು ವರ್ಷಗಳಿಂದ ಸೆಕ್ಷನ್ 3 (ಎ) ಏನಿತ್ತು ಅದರ ಪ್ರಕಾರ ಸ್ಟೇ ಆಗಿತ್ತು. ಆದರಿಂದ ನಮ್ಮ ಸರ್ಕಾರಕ್ಕೆ ಅಪಾರವಾಗಿ ಬರಬೇಕಾದಂಥ ರೆವಿನ್ಯೂ ನಿಂತು ಹೋಗಿತ್ತು. ಅದರಿಂದ ಇಲ್ಲೀಗಲ್ ಆಗಿ ಮಾಡುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್: ತಾವು ಬೆಕ್ಕಿಗೆ ಜ್ವರ ಬರುವ ರೀತಿಯಲ್ಲಿ ಮಾತನಾಡುತ್ತಿದ್ದೀರಿ. ನಿಮಗೆ ಯಾವ ರೆವಿನ್ಯೂ ಬರುವುದು, ಬೆಂಕಿ ರೆವಿನ್ಯೂ 40 ಸಾವಿರ ರೂಪಾಯಿಯ ಒಂದು ಕ್ಯೂಬಿಕ್ ಮೀಟರ್‌ಗೆ 600 ರೂಪಾಯಿ ರೆವಿನ್ಯೂ, ನಾಚಿಕೆ ಇಲ್ಲ. ಎಲ್ಲಿದೆ ನಿಮ್ಮ ರೆವಿನ್ಯೂ, ಯಾವ ರೆವಿನ್ಯೂ ಸ್ವಾಮಿ, ಏನು ಮಾತನಾಡುತ್ತಿದ್ದೀರಿ ಸ್ವಾಮಿ, ಸರ್ಕಾರಕ್ಕೆ ಒಂದು ವರ್ಷಕ್ಕೆ 700 ಕೋಟಿ ರೂಪಾಯಿ ನಷ್ಟವಾಗುತ್ತಿದೆ. ರೆವಿನ್ಯೂ ಬರುತ್ತಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಪ್ರಸೆಂಟ್ ಲೀಸ್ ಬಗ್ಗೆ ಹೇಳಿದ್ದಲ್ಲ. ಈಗ ಏನು ಲೀಸ್ ಆಗಿದೆ ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುತ್ತಾ ಇಲ್ಲ, ಅದು ಹೈಕೋರ್ಟ್‌ನಲ್ಲಿದೆ ಅದು ಪ್ರತ್ಯೇಕ. ನಾನು ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರಿಗೆ ಒಂದು ಸ್ಪಷ್ಟೀಕರಣ ಕೊಡಲಿಕ್ಕೆ ಇಷ್ಟಪಡುತ್ತೇನೆ. ಈಗ ಲೀಸ್ ಕೊಟ್ಟಿದ್ದಾರೆ ಎಂದು ಯಾವ ಪಟ್ಟಿ ಕೊಟ್ಟಿದ್ದಾರೆ, ಅದರ ಮೇಲೆ ಪಬ್ಲಿಕ್ ಲಿಟಿಗೇಷನ್ ಪಿಟೀಷನ್ ಹೈಕೋರ್ಟ್‌ಗೆ ಹೋಗಿದೆ. ಈತನ್ಮಧ್ಯೆ ಯಾವುದೇ ರೀತಿಯಿಂದ ಕಾನೂನು ತಿದ್ದುಪಡಿ ಮಾಡಿಲ್ಲ ಎಂದು ಹೇಳಿದೆ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ದಿನಾಂಕ 18-6-91 ರಂದು ನೋಟಿಫಿಕೇಷನ್ ಹೊರಡಿಸಿದಿರಿ. ಮಾರನೇ ದಿವಸ ಬೆಳಿಗ್ಗೆ ನೂರಾರು ಜನರಿಗೆ

ಲೈಸೆನ್ಸ್ ಕೊಟ್ಟಿರಿ. ಸ್ಪಾಟ್ ಇನ್ಸ್‌ಪೆಕ್ಷನ್ ಯಾವಾಗ ಆಯಿತು. ಸರ್ವೆ ಯಾವಾಗ ಆಯಿತು. ಕೋಟಿಗಟ್ಟಲೆ ಸರ್ಕಾರಕ್ಕೆ ಬರುವಂಥ ಹಣವನ್ನು ಲೂಟಿ ಮಾಡಲಿಕ್ಕೋಸ್ಕರ ಈ ಸರ್ಕಾರ ಪ್ರೈವೇಟ್ ಕಂಟ್ರಾಕ್ಟರ್ ಜೊತೆಗೆ ಸಾಮೀಲಾಗಿ ಲೂಟಿ ಮಾಡುತ್ತಿದ್ದರೆನ್ನುವ ಆಪಾದನೆ ಮಾಡಬೇಕಾಗಿದೆ. ನಾನು ಅತ್ಯಂತ ಗೌರವವಾಗಿ ದಾಖಲೆಗಳನ್ನು ಕೊಡುತ್ತೇನೆ. 18-6-91 ರಲ್ಲಿ ನೋಟಿಫಿಕೇಷನ್ ಮಾಡುತ್ತಾರೆ, 19ನೇ ತಾರೀಖು ನೂರಾರು ಜನರಿಗೆ ಲೈಸೆನ್ಸ್ ಕೊಡುತ್ತಾರೆ. ಯಾವಾಗ ಸ್ಪಾಟ್ ಇನ್ಸ್‌ಪೆಕ್ಷನ್ ಆಯಿತು? ಯಾವಾಗ ಅರ್ಜಿಗಳು ಬಂದುವು? ನೀವು ನೋಟಿಫಿಕೇಷನ್ ಹೊರಡಿಸುವುದಕ್ಕೆ ಮುಂದೆ ಅರ್ಜಿಗಳನ್ನು ಮನೆಯಲ್ಲಿ ತೆಗೆದುಕೊಂಡು ಬಂದು ಇಟ್ಟುಕೊಂಡು ವ್ಯವಹಾರಗಳನ್ನು ಮಾಡಿಕೊಂಡು, ಲೈಸೆನ್ಸ್ ಕೊಟ್ಟಿರಿ ಎಂದು ಜನ ಅನುಮಾನ ಪಡುತ್ತಿದ್ದಾರೆ. 18ನೇ ತಾರೀಖು ನೋಟಿಫಿಕೇಷನ್ ಮಾಡುತ್ತೀರಿ, 19ನೇ ತಾರೀಖು ನೂರಾರು ಜನರಿಗೆ ಲೈಸೆನ್ಸ್ ಕೊಡುತ್ತೀರಿ, ಇದು ಹೇಗೆ ಕೊಡಲಿಕ್ಕೆ ಸಾಧ್ಯವಾಯಿತು? ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ನೇರವಾಗಿ ಕೇಳಲಿಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ತಮಗೆ ಪರಮಾಧಿಕಾರ ಇದೆ. ಈಗ ನಮಗೆ ಬಂದಂಥ ಧರ್ಮ ಸಂಕಟ ಏನೆಂದರೆ ನಾವು ಅಲ್ಲಿ ಕೋರ್ಟ್‌ನಲ್ಲಿ ವ್ಯವಹರಿಸಬೇಕು, ಸಬ್‌ಜ್ಯೂಡೀಸ್ ಆಗಿದೆ. ಇಲ್ಲಿ ನಾವು ಉತ್ತರ ಕೊಡಬೇಕು. ಇವೆರಡೂ ನೋಡಿದಾಗ ನಾವು ಎಲ್ಲಿ ಉತ್ತರ ಕೊಡಬೇಕು ಎನ್ನುವುದು ತಾವು ನಿಷ್ಕರ್ಷೆ ಮಾಡಬೇಕು. ನಾವು ಈಗಾಗಲೇ ಇದು ಸಬ್‌ಜ್ಯೂಡೀಸ್ ಆಗಿದೆಯೆಂದು ಹೇಳಿದ್ದೇವೆ.

ಅಧ್ಯಕ್ಷರು : ತಾವು ಈ ಪ್ರಶ್ನೆ ಬಂದಾಗಲೇ, ಇದು ಸಬ್‌ಜ್ಯುಡೀಸ್ ಆಗುತ್ತದೆ, ಇದರ ಮೇಲೆ ಉಪ ಪ್ರಶ್ನೆಗಳು ಬೇಡ ಎಂದು ಹೇಳಿದ್ದರೆ ನಾನು ತಕ್ಷಣ ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳುತ್ತಿದ್ದೆ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿಯ ಸನ್ಮಾನ್ಯ ಸದಸ್ಯರುಗಳಾದ ಯಡಿಯೂರಪ್ಪ, ಈಶ್ವರಪ್ಪ, ರುಕ್ಮಯ್ಯಪೂಜಾರಿ ಅವರು ಅಧ್ಯಕ್ಷರ ಮುಂಭಾಗದಲ್ಲಿರುವ ವೆಲ್‌ನಲ್ಲಿ ಬಂದು ನಿಂತರು.)

(ಗೊಂದಲ)

ಅಧ್ಯಕ್ಷರು : ಹಾಗಾದರೆ, ವ್ಯವಹಾರಗಳು ಸಬ್‌ಜ್ಯುಡೀಸ್ ಆಗುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುತ್ತೀರಾ ಸಬ್‌ಜ್ಯುಡೀಸ್ ಆಗಲಿಕ್ಕೂ ಸಾಧ್ಯ ಇದೆ.

(ಗೊಂದಲ)

ಅಧ್ಯಕ್ಷರು : ನ್ಯಾಯ, ಅನ್ಯಾಯವನ್ನು ಹೈಕೋರ್ಟ್ ತೀರ್ಮಾನ ಮಾಡುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಯಾವುದೇ ಒಂದು ನ್ಯಾಯ ಇಲ್ಲ. ಇದರಲ್ಲಿ ಭ್ರಷ್ಟಾಚಾರ ನಡೆದಿದೆ. ಒಂದೇ ದಿನದಲ್ಲಿ 206 ಜನರಿಗೆ ಅನುಮತಿಯನ್ನು ಕೊಟ್ಟಿರತಕ್ಕದ್ದು ಇದೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಆಗಲೇಬೇಕು. ಇದರ ಬಗ್ಗೆ ಒಂದು ಸದನದ ಸಮಿತಿ ನೇಮಕ ಆಗಲೇಬೇಕು. ಈ ಭ್ರಷ್ಟಾಚಾರದ ಬಗ್ಗೆ ಈ ಸರ್ಕಾರ ಮಾಡಿರತಕ್ಕ ನೀತಿಯ ವಿರುದ್ಧ ನಾನು ಧರಣಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್, ಹೆಚ್.ಏಕಾಂತಯ್ಯ ಮತ್ತು ಆರ್ .ವಿ. ದೇಶಪಾಂಡೆಯವರು ಸಭಾಧ್ಯಕ್ಷರ ಮುಂದಿನ ಆವರಣದೊಳಕ್ಕೆ ಬಂದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ .: ನಾವು ಈ ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತೇವೆ. ಇದರಲ್ಲಿ ಬಹಳ ಅನ್ಯಾಯ ನಡೆದಿದೆ. ರಾಜ್ಯದ ಲೂಟಿ ಆಗಿದೆ. ನಾನು ಯಾರ ಬಗ್ಗೆಯೂ ವೈಯುಕ್ತಿಕವಾಗಿ ಹೇಳುತ್ತಿಲ್ಲ. ಹಿಂದೆ ಇಂಥ ಲೂಟಿ ಎಂದೂ ನಡೆದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಮ್ಮಿಂದ ಏನಾದರೂ ಉತ್ತರ ಬರುತ್ತದೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಏನೂ ಬರಲಿಲ್ಲ.

ಅಧ್ಯಕ್ಷರು : ನನ್ನಿಂದ ಏನು ನಿರೀಕ್ಷೆ ಮಾಡಿದ್ದಿರಿ? ನಾನು ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿಕೊಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಸಬ್ ಜುಡಿಸ್ ಆಗುತ್ತದೆಂದು ಹೇಳುತ್ತಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರು ಈ ವಿಚಾರವನ್ನು ಛಾಲೆಂಜ್ ಆಗಿ ತೆಗೆದುಕೊಂಡಿದ್ದಾರೆ. ಇದನ್ನು ನಾನು ಬಹಿರಂಗಪಡಿಸುತ್ತೇನೆಂದು ಹೇಳಿದ್ದಾರೆ. ಈ ಸ್ಥಿತಿಯಲ್ಲಿ ತಮ್ಮಿಂದ ಏನಾದರೂ ಉತ್ತರ ಬರುತ್ತದೆ, ನೀವು ನಮಗೆ ರಕ್ಷಣೆ ಕೊಡುತ್ತೀರೆಂದು ಅಂದುಕೊಂಡಿದ್ದೇವೆ. ಈ ಸದನದ ಸಮಿತಿಯನ್ನು ಮಾಡುತ್ತೇವೆ ಎಂತಲೋ ಅಥವಾ...

ಅಧ್ಯಕ್ಷರು : ಈ ಸದನದ ಸಮಿತಿ ಎಂತಲೇ? ನಾನೇ ಈ ಸದನದ ಸಮಿತಿಯನ್ನು ಮಾಡುವುದಕ್ಕೆ ತೀರ್ಮಾನವನ್ನು ತೆಗೆದುಕೊಳ್ಳಬಹುದೆ?

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಬೇಡಿಕೆ ಏನು ಇದೆ...

ಅಧ್ಯಕ್ಷರು : ಯಾವ ಕಾಲದಲ್ಲೇ ಆಗಲಿ, ಯಾವ ಸಂಸತ್ತಿನಲ್ಲೇ ಆಗಲ್ಲಿ ಅಥವಾ ಯಾವ ಶಾಸನಸಭೆಯಲ್ಲೇ ಆಗಲಿ ಸ್ವದ್‌ಸ್ಪೂರ್ತು ಸಭಾಧ್ಯಕ್ಷರೇ ನಾನು ಈ ಸದನದ ಸಮಿತಿಯನ್ನು ನೇಮಕ ಮಾಡುತ್ತೇನೆಂದು ಎಲ್ಲಾದರೂ ಹೇಳಿದ್ದಾರೆಯೆ?

ಶ್ರೀ ಡಿ.ಬಿ. ಚಂದ್ರೇಗೌಡ : ಸದನದ ಸಮಿತಿಯನ್ನು ಮಾಡುವುದಕ್ಕೆ ಬೇಕಾದಂಥ ವಾತಾವರಣವನ್ನು ತಾವೇ ಮಾಡಿಕೊಡಬೇಕು. ಸರ್ಕಾರವನ್ನು ಕೇಳಿ ಆಲೋಚನೆ ಮಾಡೋಣ ಎಂದು ತಾವು ಆದೇಶವನ್ನು ಕೊಟ್ಟರೆ....

ಅಧ್ಯಕ್ಷರು : ಸುವೋ ಮೋಟೋ ನಾನೇ ಹೇಗೆ ಮಾಡಲಿ?

ಶ್ರೀ ಡಿ.ಬಿ. ಚಂದ್ರೇಗೌಡ : ಸುವೋ ಮೋಟೋ ಮಾಡಿ ಎಂದು ನಾನು ಹೇಳುತ್ತಿಲ್ಲ. I am only seeking guidance for you. These are the demands from the Opposition. I seek the guidance of the Hon. Speaker as to how do you guide in this matter.

MR. SPEAKER : If you want my guidance, I would request all those Hon.Members who have gathered in the well to go back to their seats. I request the hon.members to go back and resume their seats. That is the only

guidance I can give. Then let us to step by step. They are ready. Let us go step by step.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಗ್ರ್ಯಾನೈಟ್ ಅವ್ಯವಹಾರದ ಬಗ್ಗೆ ಸದನದ ಒಂದು ಸಮಿತಿಯನ್ನು ನೇಮಕ ಮಾಡಿ 3 ದಿವಸದಲ್ಲೇ ವರದಿಯನ್ನು ನೀಡುವಂತೆ ಮಾಡಿ. ಈ ಸರ್ಕಾರ ಗ್ರ್ಯಾನೈಟ್ ವ್ಯವಹಾರದಲ್ಲಿ ಲೂಟಿ ಮಾಡಿರತಕ್ಕದ್ದನ್ನು ನಾವು ಪ್ರೂವ್ ಮಾಡುತ್ತೇವೆ. ತಾವು ಸದನವು ಸಮಿತಿಯನ್ನು ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾನೂನು ಬಾಹಿರವಾಗಿ ಏನು ಮಾಡಿದ್ದಾರೆಂಬುದನ್ನು ಹೇಳುತ್ತೇವೆ. ನಾವು ಎಲ್ಲವನ್ನೂ ಸಾಬೀತು ಮಾಡಲಿಕ್ಕೆ ಸಿದ್ಧಾಧಾಗಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಸರ್ಕಾರವನ್ನು ಕೇಳಿ. ಸದನದ ಸಮಿತಿಗೆ ಅವರು ಒಪ್ಪಿಕೊಂಡರೆ ನಾವು ಚರ್ಚೆ ಮಾಡುತ್ತೇವೆ. ಇದು ಯಾವುದೂ ಇಲ್ಲದೆ ಏಕಾಏಕಿ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ತಾವು ವಕೀಲರಿದ್ದೀರಿ. ತಾವು ವಿಷಯಗಳನ್ನು ಗಮನಿಸಿ ಇಲ್ಲಿ ನಮಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು : ನಾನು ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ. ಪ್ರಶ್ನೆಗಳಿಗೆ ಉತ್ತರ ಕೊಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಅಷ್ಟೆ.

(ಗೊಂದಲ)

ಅಧ್ಯಕ್ಷರು : ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ ; ತಾವು ಈ ಪ್ರಶ್ನೆಯನ್ನು ಅಚ್ಚು ಮಾಡಿಸುವುದಕ್ಕೆ ಹಾಕಿದ್ದೀರಿ. ಎಂದರೆ, ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡಿಲ್ಲವೆ? ತಮ್ಮ ಅಭಿಪ್ರಾಯದಲ್ಲಿ ಇದು ಸಬ್‌ಜುಡಿಸ್ ಆಗುವುದಿಲ್ಲ ಎಂಬ ನಿರ್ಣಯಕ್ಕೆ ಬಂದು, ಈ ಪ್ರಶ್ನೆ ಅಚ್ಚಾಗಿದೆ ಎಂದು ನಾವು ಭಾವನೆ ಮಾಡುತ್ತೇವೆ.

ಅಧ್ಯಕ್ಷರು : ಸರ್ಕಾರ ಯಾವಾಗ ಉತ್ತರ ಕೊಟ್ಟಿತೋ...

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವೇಳೆ ಇದು ಸಬ್‌ಜುಡಿಸ್ ಆಗುತ್ತದೆಂದು ಸರ್ಕಾರದ ಮನಸ್ಸಿಗೆ ಬಂದಿದ್ದರೆ ಅವತ್ತೇ, ಪ್ರಾರಂಭದಲ್ಲೇ ಹೇಳಬಹುದಿತ್ತು. ಆದರೆ ಇವತ್ತು ಇನ್‌ಕನ್ವೀನಿಯಂಟ್ ಟೈಂ ಬಂದಾಗ, ಇದು ಸಬ್‌ಜುಡಿಸ್ ಆಗುತ್ತದೆಂದು ಹೇಳಿದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ವಿರೋಧಪಕ್ಷದ ನಾಯಕರು ಸ್ವಲ್ಪ ಯೀಲ್ಡ್ ಆಗಬೇಕು. ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಸ್ಥಾನದಲ್ಲಿದ್ದವರು. ಈಗ ಪ್ರಶ್ನೆಗೆ ಸಬ್‌ಜ್ಯುಡೀಸ್ ಆಗುತ್ತದೆಂದು ಒಂದೇ ಒಂದು ಶಬ್ದದಲ್ಲಿ ನಾವು ಉತ್ತರ ಕೊಡಬಹುದಿತ್ತು. ಆದರೂ ಕೊಡಲಿಲ್ಲ. ಆದರೆ ತಮ್ಮ ಆದೇಶದ ಪಕಾರ ನಾವು ಉತ್ತರವನ್ನ ಕೊಟ್ಟಿದ್ದೇವೆ. ಈಗಲೂ ಕೂಡ ಅಷ್ಟೆ ; ತಾವು ಅದೇ ಸ್ಥಾನದಲ್ಲಿದ್ದು, Suppose the House holds that the matter is sub-judice, the Government has already answered to the question. The full facts should be available. The Government is prepared to give full facts.

ತಮಗೆ ಪರಮ ಅಧಿಕಾರವಿದೆ. ತಾವು ಆದೇಶವನ್ನು ಕೊಟ್ಟರೆ ಅದರಲ್ಲಿ ಏನಾದರೂ ಅಡಗಿಟ್ಟುಕೊಳ್ಳಬೇಕೆಂಬ ಉದ್ದೇಶ ನಮಗೆ ಇಲ್ಲ.

MR.SPEAKER : Before I call Prof. Nanjundswamy, let me put the matters correct. ಪ್ರಶ್ನೆಯನ್ನು ನಾವು ಅಡ್ಮಿಟ್ ಮಾಡಿದ್ದೇವೆ. ಸರ್ಕಾರದ ವತಿಯಿಂದ ಉತ್ತರಗಳನ್ನು ಒದಗಿಸಿ ಕೊಡಲಾಗಿದೆ. ಆ ಉತ್ತರಗಳ ಮೇಲೆ ಉದ್ಭವಿಸಬಹುದಾದಂಥ ಉಪಪ್ರಶ್ನೆಗಳಿಗೂ ಕೂಡ ಅವಕಾಶ ಮಾಡಿಕೊಟ್ಟಿದ್ದಾಗಿದೆ. ಉಪಪ್ರಶ್ನೆಗಳಿಗೂ ಕೂಡ ಸರ್ಕಾರ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡಿದೆ. ಆದ್ದರಂದ ಸಬ್‌ಜ್ಯುಡಿಸ್ ಎನ್ನತಕ್ಕಂಥ ವೃತ್ತಾಂತ ಬಹಳ ಲೇಟ್ ಸ್ಟೇಜಿನಲ್ಲಿ ಬಂದಿದೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಹೇಳುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಪ್ರಶ್ನೆ ಬಂದಿದೆ, ಉತ್ತರ ಕೊಟ್ಟಿದ್ದಾರೆ. ಉಪ ಪ್ರಶ್ನೆಗಳಿಗೂ ಅವಕಾಶ ಆಗಿದೆ. ಆದ್ದರಿಂದ ಲೇಟ್ ಸ್ಟೇಜಿನಲ್ಲಿ ಸಬ್‌ಜ್ಯುಡೀಸ್ ಪ್ರಶ್ನೆ ಬಂದಿದೆ ಎನ್ನುವ ವಿಚಾರ ಅಲ್ಲವೇ ಅಲ್ಲ ಇದು. ಮೂಲಭೂತವಾಗಿ ನಾನು ಕೇಳುತ್ತಿದ್ದೇನೆ. Even in spite of the fact that the matter is sub-judice, this House has the right to discuss it. ಅದನ್ನು ಬಿಟ್ಟು ನಾವು ಏನಾದರೂ ಆಚೆ ಈಚೆಗೆ ಹೋದರೆ ಬಹಳ ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೀರಿ.

I might be an youngest Member of this Assembly but I am capable of bringing, any matter which comes up for discussion , under the umbrella of sub-judice and block it. ಈ ಕಾರಣಕ್ಕಾಗಿ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಜಾಣ ಇಂಟರ್ ಪ್ರಿಟೇಷನ್‌ಗಳನ್ನು ಆದಷ್ಟು ಕೈಬಿಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಅಧ್ಯಕ್ಷರೇ, ಈ ವಿವಾದ ಪ್ರಾರಂಭವಾಗಿದ್ದು ಶ್ರೀಮಾನ್ ಸಿಂಧ್ಯರವರು ಕೋರ್ಟಿನಲ್ಲಿ ಪಬ್ಲಿಕ್ ಲಿಟಿಗೇಷನ್ ಪಿಟಿಷನ್ ಹಾಕಿದ ಮೇಲೆ ಅವರು ಇದರಲ್ಲಿ ಸ್ಟೇ ತೆಗೆದುಕೊಂಡಿರುತ್ತಾರೆ. ಅಂಡರ್ ಪ್ರಾವಿಷನ್ ಮೂರರಲ್ಲಿ ಇಷ್ಯು ಆಗಿರತಕ್ಕಂಥ ನೋಟೀಫಿಕೇಷನ್‌ಗೆ ಸ್ಟೇ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವುದರ ಮೇಲೆ ಸ್ಟೇ ತೆಗೆದುಕೊಂಡಿದ್ದೇನೆ ಎನ್ನುವುದನ್ನು ನಾನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ತಾವು ಸ್ಟೇ ತೆಗೆದುಕೊಂಡಿರುವುದು ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ. ನೋಟೀಫಿಕೇಶನ್ ಸ್ಟೇ ಆದ ಮೇಲೆ ನೀವು ಅದನ್ನು ಪ್ರಶ್ನೆ ಮಾಡುವಂತಿಲ್ಲ.

ಅಧ್ಯಕ್ಷರು : ಸರಿ ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಕಾನೂನು ಪ್ರಕಾರ ಇರಬಹುದು.

(ಗೊಂದಲ)

ಶ್ರೀ ಆರ್. ದಯಾನಂದರಾವ್ : ಮಾನ್ಯ ಅಧ್ಯಕ್ಷರೇ, ನೋಟೀಫಿಕೇಷನ್ ಆದ ಮೇಲೆ ಸಬ್‌ಜ್ಯುಡೀಸ್ ಆಗುತ್ತದೆ. ಆದುದರಿಂದ ಅದನ್ನು ಡಿಸ್‌ಕಸ್ ಮಾಡುವಂತೆ ಇಲ್ಲವೆಂದು ನಾನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆದಿರುತ್ತೇನೆ. ಅವರು ಮಾತನಾಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಏನಾದರೂ ನಮಗೆ ಅಪ್ಪಣೆ ಕೊಡುತ್ತೀರೆಂಬ ನಿರೀಕ್ಷಣೆಯಲ್ಲಿ ನಾವು ಇಲ್ಲಿ ಕುಳಿತಿದ್ದೇವೆ. ನಾವು ಈಗಾಗಲೇ 2-3 ಬೇಡಿಕೆಗಳನ್ನು ತಮ್ಮ ಮುಂದಿಟ್ಟಿದ್ದೇವೆ. ನ್ಯಾಯಾಂಗ ತನಿಖೆ ಮಾಡಿಸಬೇಕೆಂಬುದದು ಒಂದು ಬೇಡಿಕೆ ಸದನದ ಸಮಿತಿ ಮಾಡಬಹುದೆಂಬುದು ಮತ್ತೊಂದು ಬೇಡಿಕೆ. ಮಂತ್ರಿಗಳಿಗೂ ಮತ್ತು ಹಿರಿಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರಿಗೂ ಚಾಲೆಂಜ್, ಕೌಂಟರ್ ಚಾಲೆಂಜ್ ಆಗಿದೆ. ಇದನ್ನು ಅಕ್ಸೆಪ್ಟ್ ಮಾಡುತ್ತೀರಾ ಎಂಬುದು ಇನ್ನೊಂದು.

ಅಧ್ಯಕ್ಷರು : ಚಾಲೆಂಜ್ ಆಗಿದೆ. ಕೌಂಟರ್ ಚಾಲೆಂಜ್ ಆಗಿಲ್ಲ ಆದ್ದರಿಂದ stop that .

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗಲ್ಲ, ಕೌಂಟರ್ ಚಾಲೆಂಜ್‌ಗೆ ಅವರು ತಯಾರಾಗಿರಬೇಕಲ್ಲ. ಇದರಲ್ಲಿ ತಾವು ನಮಗೆ ಯಾವುದಾದರೂ ಒಂದು ರೀತಿಯ ಮಾರ್ಗದರ್ಶನ ಮಾಡಬಹುದೆಂದು ನಿಂತಿದ್ದೇವೆ ಅಷ್ಟೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕುಳಿತುಕೊಳ್ಳುವ ಜಾಗ ಅಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಸಂಸದೀಯ ವ್ಯವಹಾರ ಮಂತ್ರಿಗಳು ಇದು ಸಬ್‌ಜ್ಯುಡೀಸ್ ಆಗುತ್ತದೆಂದು ಬಹಳ ತಡವಾಗಿ ಹೇಳಿದ್ದಾರೆ. The matter is there. I am the applicant...

SRI M. VEERAPPA MOILY : Suppose, we do not bring it. At any stage I can bring it ...

ಶ್ರೀ ಪಿ.ಜಿ.ಆರ್. ಸಿಂಧ್ಯ : ತಾವು ಇನ್‌ಫರ್ಮೇಷನ್ ನನ್ನು ಹೌಸಿಗೆ ತಂದಿರುವುದು I am not trying to find fault with that.ಇದು ಕೋರ್ಟಿನಲ್ಲಿದೆ ಎಂದು ನಾನೇ ಹೌಸ್‌ಗೆ ಹೇಳಿದೆ. ನಾವು ಇಲ್ಲಿ ಏನು ಪ್ರಶ್ನೆಗಳನ್ನು ಹಾಕಿದ್ದೇವೆ ಈ ಪ್ರಶ್ನೆಗಳು ನಾವು ಕೋರ್ಟಿನಲ್ಲಿ ಹಾಕಿರತಕ್ಕದ್ದನ್ನು ಬಿಟ್ಟು ಇರತಕ್ಕದ್ದು. ಕೋರ್ಟಿನಲ್ಲಿ ನಾನು ಏನು ಹಾಕಿದ್ದೇನೆಂಬುದನ್ನು ಹೇಳಬೇಕಾಗುತ್ತದೆ. ಕೋರ್ಟಿನಲ್ಲಿ ಏನು ಪ್ರಶ್ನೆ ಹಾಕಿದ್ದೇವೆಂದರೆ, ಎರಡೂವರೆ ಸಾವಿರ ಅರ್ಜಿಗಳು ಇರತಕ್ಕದ್ದು ಏನಿದೆ ಅದರಲ್ಲಿ 200 ಜನರಿಗೊ 300 ಜನರಿಗೊ 400 ಜನರಿಗೊ ಎಂದು ಏನು ಒಂದು ಸಂಖ್ಯೆ ಕೊಟ್ಟಿದ್ದೀರಿ ಅದನ್ನು ಯಾವ ಬೇಸಿಸ್ ಮೇಲೆ ಸೆಲೆಕ್ಟ್ ಮಾಡಿದ್ದೀರಿ, ಈ ರೀತಿ ಮಾಡಿರುವುದು ತಪ್ಪು ಎಂದು ಕೋರ್ಟಿನಲ್ಲಿ ಕೇಳಿದ್ದೇವೆ. ಅದರ ಬಗ್ಗೆ ನಾವು ಇಲ್ಲಿ ಕೇಳುತ್ತಿಲ್ಲ. ನಾವು ಕೇಳುತ್ತಿರುವುದು ಏನೆಂದರೆ, ಸರ್ಕಾರದ ನೀತಿ ಏನಿದೆ ಆ ನೀತಿಯನ್ನು ಪ್ರಕಟಣೆ ಮಾಡುವುದಕ್ಕೆ ಮುಂಚೆ 18ನೇ ತಾರೀಖು ನೋಟಿಫಿಕೇಷನ್ ಅಮೆಂಡ್ ಮಾಡಿದ್ದೇವೆಂದು ಹೇಳಿ, 19ನೇ ತಾರೀಖು ಬೆಳಿಗ್ಗೆ ಯಾವ ಬೇಸಿಸ್ ಮೇಲೆ ಅನುಮತಿ ಕೊಟ್ಟಿದ್ದೀರಿ ಎಂದು ನಾವು ಕೇಳಿರತಕ್ಕದ್ದು. ಆದುದರಿಂದ ಇದರಲ್ಲಿ ಸಬ್‌ಜ್ಯುಡೀಸ್ ಪ್ರಶ್ನೆ ಬರುವುದಿಲ್ಲ. ಇದು ಮೊದಲನೆಯದು. ಎರಡನೆಯದಾಗಿ ಈ ಸರ್ಕಾರಕ್ಕೆ ಏನು ನೀತಿ ಇದೆ ಎನ್ನುವುದು ಇವತ್ತು ನಮ್ಮೆಲ್ಲರಿಗೂ ಬೇಕಾಗಿರತಕ್ಕದ್ದು. ಅದರ ವಿರುದ್ಧವಾಗಿ ನಾವೆಲ್ಲಾ ಪ್ರತಿಭಟನೆ ಮಾಡುತ್ತಿದ್ದೇವೆ. ಇದನ್ನು ಹೇಳಬೇಕೆಂದು ನಾನು ಬಯಸಿರುವುದು. ಇವತ್ತು ನಿಮ್ಮ ನೀತಿ ಏನಿದೆ ಆ ನೀತಿ ಸರಿಯಲ್ಲ. ಇವತ್ತು ರಾಜ್ಯ ಸರ್ಕಾರದ ಮುಂದೆ ಮೈಸೂರ್ ಮಿನರಲ್ಸ್ ಆಕ್ಟ್ ಇರಬಹುದು, ಅಥವಾ ಕೇಂದ್ರ ಸರ್ಕಾರದಿಂದ ನಿಮಗೆ ಬಂದಿರತಕ್ಕ ಪತ್ರಗಳು, ಮತ್ತಿತರ ವ್ಯವಹಾರಗಳು ಇರಬಹುದು. ಆ ವ್ಯವಹಾರಗಳ ಹಿನ್ನೆಲೆಯಲ್ಲಿ ನೀವು ಮಾಡಿರತಕ್ಕದ್ದು ಸರಿಯಲ್ಲವೆಂದು ನಾವು ಪ್ರತಿಭಟನೆ ಮಾಡುತ್ತಿದ್ದೇವೆ. ಅದಕ್ಕೋಸ್ಕರ ನಾನು ಹೇಳಿದ್ದು. ಇದು ಬಹಳ ಮಹತ್ವದ ವಿಚಾರ, ಇದಕ್ಕೆ ವಿಶೇಷ ಅವಕಾಶ ಕೊಡಬೇಕು ಎಂದು

ನಾವು ಹೇಳುತ್ತಿದ್ದೇವೆ. ಇವತ್ತು ನೀವು ಏನು ಧೋರಣೆ ಇಟ್ಟುಕೊಂಡಿದ್ದೀರಿ ಅದನ್ನು ನಾವು ಪ್ರತಿಭಟನೆ ಮಾಡಿ ಧರಣಿ ಮಾಡುತ್ತಿದ್ದೇವೆ.

(ಮಾನ್ಯ ಚಂದ್ರೇಗೌಡರು ಮತ್ತು ಶ್ರೀ ಸಿಂಧ್ಯರವರು ಧರಣಿಯಲ್ಲಿ ಪಾಲ್ಗೊಂಡರು.)

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು

(ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.)

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 30-8-91 ರ ಅಜೆಂಡಾ ಪ್ರಕಾರ 19ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸಬೇಕಾಗಿರುವ 14 ಪ್ರಶ್ನೆಗಳ ಪೈಕಿ 2002 ಮತ್ತು 2003 ಪ್ರಶ್ನೆಗಳನ್ನು ಹೊರತುಪಡಿಸಿ, ಉಳಿದ 12 ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಿರುವ ತಾಲ್ಲೂಕುವಾರು ವಿವರದ ಬಗ್ಗೆ

1833 - ಶ್ರೀ ಹೆಚ್.ಎಮ್. ರೇವಣ್ಣ (ಮಾಗಡಿ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿನ ಎಷ್ಟು ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಛೇರಿಗಳಿವೆ? ತಾಲ್ಲೂಕುವಾರು ವಿವರ ನೀಡುವುದು?

ಆ) ಎಲ್ಲಾ ತಾಲ್ಲೂಕುಗಳಲ್ಲಿ ಸದರಿ ಇಲಾಖೆಯ ಕಛೇರಿಗಳನ್ನು ಪ್ರಾರಂಭಿಸದಿರುವುದು ನಿಜವೇ?

ಹಾಗಿದ್ದಲ್ಲಿ ಆದಕ್ಕೆ ಕಾರಣಗಳೇನು?

ಇ) ಈ ಮೇಲ್ಕಂಡ ಇಲಾಖೆಯನ್ನು ಯಾವ ಆಧಾರದ ಮೇರೆಗೆ ಪರಿಗಣಿಸಲಾಗುತ್ತಿದೆ.

ಈ) ಡಾ. ಅಂಬೇಡ್ಕರ್‌ರವರ ಶತಮಾನೋತ್ಸವದ ಅಂಗವಾಗಿ ರಾಜ್ಯದಲ್ಲಿ ಉಳಿದಿರುವ ಎಲ್ಲಾ ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಪಾರಂಭಿಸಲಾಗುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) 35. (ಪಟ್ಟಿ ಲಗತ್ತಿಸಿದೆ)

ಆ) ಹೌದು.

ಇ) 10 ಇಲಾಖಾ ಸಂಸ್ಥೆಗಳು ಇದ್ದು ಮತ್ತು 50,000 ಕ್ಕೆ ಹೆಚ್ಚಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಜನಸಂಖ್ಯೆ ಇದ್ದ ತಾಲ್ಲೂಕುಗಳಲ್ಲಿ ನಿಗದಿಪಡಿಸಿದ ಸೂತ್ರದಂತೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಕಛೇರಿಗಳನ್ನು ಪ್ರಾರಂಭಿಸಲಾಗುವುದು.

ಈ) ಇದೆ.

ಉ) ಉದ್ಭವಿಸುವುದಿಲ್ಲ.

ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆಗಳನ್ನು ಈ ಕೆಳಕಂಡ ತಾಲ್ಲೂಕುಗಳಲ್ಲಿ ಸೃಜಿಸಲಾಗಿದೆ.

1. ಬೆಂಗಳೂರು (ಉತ್ತರ)
2. ಬೆಂಗಳೂರು (ದಕ್ಷಿಣ)
3. ಆನೇಕಲ್ ಬೆಂಗಳೂರು ಜಿಲ್ಲೆ